MVC 1273/2022

ದಿನಾಂಕ 09-06-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ
ಪ್ರಮಾಣಿಕರಿಸಲಾಯಿತು.

**ಪಾಟಿ ಸವಾಲುಃ ಶ್ರೀ ಬಿ.ಎ.ಎಸ್. ಎದುರುದಾರರ ಪರ ವಕೀಲರಿಂದಃ ರ**

ಅಪಘಾತದ ದಿನದಂದು ನನ್ನ ಗಂಡ ದಾವಾಲಸಾಬ ತನ್ನ ವಾಹನವನ್ನು ನಿಧಾನಗತಿಯಲ್ಲಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಅಪಘಾತದ ವಿಚಾರವಾಗಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಪೊಲೀಸರಿಗೆ ನಾನು ನನ್ನ ಹೇಳಿಕೆಯಲ್ಲಿ ನಂದಕುಮಾರ ನನ್ನ ಗಂಡನಿಗೆ ವಾಹನವನ್ನು ನಿಧಾನವಾಗಿ ಚಾಲನೆ ಮಾಡು ಅಂತ ಹೇಳಿದರೂ ಸಹ ನನ್ನ ಗಂಡ ದವಲಸಾಬ ಆಸ್ಪತ್ರೆಗೆ ಹೋಗಿ ವಾಪಾಸ್ ಬರಬೇಕು ಎಂದು ಹೇಳಿ ತನ್ನ ವಾಹನವನ್ನು ವೇಗವಾಗಿ ಚಾಲನೆ ಮಾಡಿದ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ತನ್ನ ಹೇಳಿಕೆಯ ಭಾಗವನ್ನು ಅಲ್ಲಗಳೆದಿದ್ದು, ಸದರಿ ದಾಖಲಾತಿ ಝುರಾಕ್ಸ್ ಪ್ರತಿ ಆಗಿದ್ದು, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದು, ಸದರಿ ಹೇಳಿಕೆಯ ದಾಖಲೆಯ ಭಾಗವನ್ನು ಸದರಿ ದಾಖಲೆಯ ದೃಢೀಕೃತ ನಕಲನ್ನು ಹಾಜರುಪಡಿಸುವ ಷರತ್ತಿಗೆ ಒಳಪಟ್ಟು ನಿಆರ್–1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಪೊಲೀಸರು ಸುಳ್ಳು ಬರೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಅಪಘಾತವು ನನ್ನ ಗಂಡ ದಾವಲಸಾಬ ಹಾಗೂ ಎದುರುದಾರರ ತಪ್ಪಿನಿಂದ ಆದ ಕಾರಣ ಪೊಲೀಸರು ನನ್ನ ಗಂಡ ಹಾಗೂ ಎದುರುದಾರನ ಮೇಲೆ ದೂರು ದಾಖಲು ಮಾಡಿರುತ್ತಾರೆ ಎಂದರೆ ಸಾಕ್ಷಿ ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಮಾತ್ರ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ನನ್ನ ಗಂಡ ಆ ದಿನ ಚಾಲನೆ ಮಾಡುತ್ತಿದ್ದ ದ್ವಿ–ಚಕ್ರ ವಾಹನ ನಂದಕುಮಾರರವರಿಗೆ ಸೇರಿದ್ದು.

ನಾನು ಸದರಿ ನಂದಕುಮಾರರವರಿಗೂ ಹಾಗೂ ನಂದಕುಮಾರರವರ ವಾಹನದ ವಿಮೆ ಮಾಡಿಸಿದ ಕಂಪನಿಯವರನ್ನು ಸಹ ಪ್ರಸ್ತುತ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನನ್ನ ಗಂಡ ದಾವಾಲಸಾಬರವರು ವಾಹನ ಚಾಲನೆ ಪರವಾನಿಗೆ ಹೊಂದಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ವಾಹನ

ಚಾಲನಾ ಪರವಾನಿಗೆ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಗಂಡ ಹೆಲ್ಮೇಟನ್ನು ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತದ ದಿನದಂದು ನನ್ನ ಗಂಡ ಹೆಲ್ಮೇಟನ್ನು ಧರಿಸಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಸಮಯದಲ್ಲಿ ನನ್ನ ಗಂಡನ ವಯಸ್ಸು 52 ವಯಸ್ಸಾಗಿತ್ತು ಎಂದರೆ ಆಗಿರಬಹುದು, ನಾನು ಶಾಲೆ ಕಲಿತಿಲ್ಲ, ಆದ್ದರಿಂದ ನನಗೆ ವಯಸ್ಸು ಗೊತ್ತಾಗುವುದಿಲ್ಲ. ನನ್ನ ಗಂಡ ಖಾಸಗಿ ಕೆಲಸ ಹಾಗೂ ಕೃಷಿ ಒಕ್ಕಲುತನ ಮಾಡುತ್ತಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ ಎಂದು ನುಡಿಯುತ್ತಾರೆ.

ನನ್ನ ಗಂಡನಿಗೆ ಯಾವುದೇ ಆದಾಯ ಇರಲಿಲ್ಲ ಹಾಗೂ ನನ್ನ ಗಂಡನಿಗೆ ಆದಾಯ ಇದ್ದ ಬಗ್ಗೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ಹಾಗೆಯೇ ಓಡಾಡಿಕೊಂಡು ಇದ್ದ ಎಂದರೆ ಸರಿಯಲ್ಲ.

ಆ ದಿನ ಟ್ರ್ಯಾಕ್ಟರ್ ಚಾಲಕ ನಿಧಾನವಾಗಿ ಚಾಲನೆ ಮಾಡುತ್ತಿದ್ದ ಸಮಯದಲ್ಲಿ ನನ್ನ ಗಂಡ ದ್ವಿ-ಚಕ್ರ ವಾಹನವನ್ನು ವೇಗವಾಗಿ ಸಲಾಯಿಸಿಕೊಂಡು ಬಂದು ರೋಡಿನ ಮಧ್ಯದಲ್ಲ ಬಂದು ಟ್ರ್ಯಾಕ್ಟರ್ ವಾಹನಕ್ಕೆ ಡಿಕ್ಕಿಪಡಿಸಿ ಅಪಘಾತಪಡಿಸಿಕೊಂಡಿರುತ್ತಾನೆ ಎಂರದೆ ಸರಿಯಲ್ಲ. ಅಪಘಾತವು ಟ್ರ್ಯಾಕ್ಟರ್ ಚಾಲಕನ ತಪ್ಪಿನಿಂದ ಆಗಿರದಿದ್ದರೂ ಸಹ ಪರಿಹಾರ ಧನ ಪಡೆಯುವ ಉದ್ದೇಶದಿಂದ ಟ್ರ್ಯಾಕ್ಟರ್ ಮಾಲೀಕನ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಅರ್ಜಿಯಲ್ಲಿ ಕೇಳಿದ ಪರಿಹಾರ ಹಣಕ್ಕೆ ಯಾವುದೇ ಆಧಾರ ಇಲ್ಲ ಎಂದರೆ ಸರಿಯಲ್ಲ. ಪರಿಹಾರ ಧನ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಜೇವರ್ಗಿ

Case called out. PW.1 present.

Respondent counsel fully cross examined to PW1 and got marked Ex.R1.

Call on for further petitioner side evidence by 23-06-2023

Sr. C.J. & JMFC, Jewargi